## ಆನೆ ದಂತದ ಕುರ್ಚಿ ಮತ್ತು ಟೀಪಾಯ್

ಪಶ್ಚಿಮ ಬಂಗಾಳದ ರಾಜಧಾನಿಯಾದ ಕೋಲ್ಕತ್ತಾದಲ್ಲಿ, ಬ್ರಿಟಿಷ್ ಆಳ್ವಿಕೆಯ (1906ರಿಂದ 1921) ಮಧ್ಯಂತರದಲ್ಲಿ ವಿಕ್ಟೋರಿಯಾ ರಾಣಿಯ ಸ್ಮರಣಾರ್ಥ, ಬೃಹತ್ ವಿಕ್ಟೋರಿಯಾ ಸ್ಮಾರಕ ಭವನ ಕಟ್ಟಲಾಯಿತು. ಈಗ ಇದು ಪ್ರವಾಸಿಗರ ಆಕರ್ಷಣೀಯ ವಸ್ತುಸಂಗ್ರಹಾಲಯವಾಗಿದೆ. ಆನೆದಂತದ ಕುರ್ಚಿ ಮತ್ತು ಟೀಪಾಯ್ ಪ್ರೇಕ್ಷಕರ ಗಮನ ಹೆಚ್ಚಾಗಿ ಸೆಳೆಯುತ್ತದೆ. ವಾರನ್ ಹೇಸ್ಟಿಂಗ್ಸ್‌ನು ಬ್ರಿಟಿಷ್ ಭಾರತದ ಗವರ್ನರ್ ಜನರಲ್ ಆಗಿದ್ದ ಕಾಲದಲ್ಲಿ ಬಂಗಾಲ್ ಪ್ರಾಂತ್ಯದ ನವಾಬ ಮೀರ್ ಜಾಫರ್‌ನ ಹೆಂಡತಿ ಮುನ್ನಿ ಬೇಗಮ್ ಅವರು ಶ್ರೀಮತಿ ವಾರನ್ ಹೇಸ್ಟಿಂಗ್ಸ್‌ಗೆ ಇವುಗಳನ್ನು ಕಾಣಿಕೆಯಾಗಿ ನೀಡಿದಳು. ಇದನ್ನು ಇಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ.

ಎಂ.ಎನ್. ಜೋಶಿ, ಮೈಸೂರು





## ದಾಹ ತಣಿಸುವ ‘ಜಲ ಕುಟೀರ’

ರಾಘವೇಂದ್ರ ಸ್ವಾಮಿಗಳ ಮಠವಿರುವ ಮಂತ್ರಾಲಯಕ್ಕೆ ಭೇಟಿ ನೀಡುವ ಭಕ್ತರ ನೀರಿನ ದಾಹ ತಣಿಸಲು ಮಠದ ಆಡಳಿತ ಮಂಡಳಿಯು, ಜನಸಂಚಾರ ಇರುವ ಆಯಕಟ್ಟಿನ ಜಾಗಗಳಲ್ಲಿ ಜಲ ಕುಟೀರ ಸ್ಥಾಪನೆ ಮಾಡಿದ್ದಾರೆ. ಬೆತ್ತದ ಚಾಪೆಯ ಕುಟೀರ ಸ್ಥಾಪಿಸಿ, ಅದರಡಿಯಲ್ಲಿ ಮೃತ್ತಿಕೆ ಹೂಜಿಯಲ್ಲಿ ಶುದ್ಧ ನೀರನ್ನು ಇರಿಸಲಾಗಿದೆ. ನೀರನ್ನು ತಂಪಾಗಿಸುವ ಗುಣ ಈ ಮೃತ್ತಿಕೆ ಹೂಜಿಗಿರುವುದು ವಿಶೇಷ. ನಿತ್ಯವೂ ಸಾವಿರಕ್ಕೂ ಅಧಿಕ ಮಂದಿ ಈ ಕುಟೀರಕ್ಕೆ ಬಂದ ದಾಹ ತಣಿಸಿಕೊಳ್ಳುತ್ತಿದ್ದಾರೆ.

ತಾರಾನಾಥ್ ಮೇಸ್ತ ಶಿರೂರು, ಉಡುಪಿ

## ಹಾಳೆಯ ಚಪ್ಪಲಿ

ಮದುವೆಗೂ ಮೊದಲು ವರ ಮಹಾಶಯ ಕಾಶೀಯಾತ್ರೆಗೆ ಹೊರಡಬೇಕೆನ್ನುವ ಶಾಸ್ತ್ರವಿದೆ. ಈ ಸಂದರ್ಭದಲ್ಲಿ ಅವನಿಗೆ ಧರಿಸಲು ಅಡಿಕೆ ಮರದ ಹಾಳೆಯಿಂದ ತಯಾರಿಸಿದ ಚಪ್ಪಲಿಗಳನ್ನು ಧರಿಸಲು ಕೊಡುವ ಕ್ರಮ ದಕ್ಷಿಣ ಕರಾವಳಿ ಭಾಗದಲ್ಲಿದೆ. ಹೀಗೆ ಮದುವೆಯೊಂದಕ್ಕೆ ಹೋಗಿದ್ದಾಗ ಕಾಶೀಯಾತ್ರೆಗೆ ಹೊರಡಬೇಕಿದ್ದ ವರ ಮಹಾಶಯನಿಗಾಗಿ ಸಿದ್ಧ ಪಡಿಸಿದ ಅಡಿಕೆ ಮರದ ಹಾಳೆಯ ಚಪ್ಪಲಿಗಳು ಕಂಡವು.

ಸೀಮಾ ಪೋನಡ್ಕ, ಪುತ್ತೂರು

